ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಡಿಸೆಂಬರ್ 2018

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-18 ಸಂಚಿಕೆ-12 ಪುಟಗಳು-8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಶಾರದಾ ಮಂಟಪಕ್ಕೆ ವಿಶಾಲ ಪಾರ್ಕಿಂಗ್ ವ್ಯವಸ್ಥೆ






ಉಡುಪಿಯ ಕುಂಜಿಬೆಟ್ಟಿನ ನಮ್ಮ ಶ್ರೀ ಶಾರದಾ ಮಂಟಪವು ಉಡುಪಿಯಲ್ಲಿ ಪ್ರಥಮ ಪ್ರಾಶಸ್ತ್ಯದ ಸಭಾಂಗಣವಾಗಿದ್ದು ಮಿತದರದಲ್ಲಿ ಆಧುನಿಕ ಸೌಕರ್ಯಗಳನ್ನು ನೀಡುತ್ತಾ "ನಂಬರ್ ಒನ್" ಸ್ಥಾನವನ್ನು ಉಳಿಸಿಕೊಂಡು ಬಂದಿದೆ. ಕಳೆದ ವರ್ಷವಷ್ಟೇ ಸಭಾಂಗಣದ ಸಮಗ್ರ ನವೀಕರಣ ಕಾಮಗಾರಿಯನ್ನು ಸಂಪೂರ್ಣಗೊಳಿಸಲಾಗಿದೆ. ಮುಖ್ಯ ಸಭಾಂಗಣಕ್ಕೆ ವಿಟ್ರಿಫೈಡ್ ಟೈಲ್ಸ್ ಅಳವಡಿಕೆ, ಅಡಿಗೆ ಕೋಣೆಯ ನವೀಕರಣ, ಶೌಚಾಲಯದ ನವೀಕರಣ, ವಾತಾನುಕೂಲ ಅಳವಡಿಕೆ, ಸಿಸಿ ಕೆಮರಾ ಅಳವಡಿಕೆ ಇತ್ಯಾದಿ ಕೆಲಸಗಳನ್ನು ಈಗಾಗಲೆ ಮುಗಿಸಿದ್ದು ಗ್ರಾಹಕರ ಮೆಚ್ಚುಗೆಯನ್ನು ಗಳಿಸಿದೆ.

ಉಡುಪಿ ಮಣಿಪಾಲ ರಸ್ತೆಯು ರಾಷ್ಟ್ರೀಯ ಹೆದ್ದಾರಿಯಾಗಿದ್ದು , ಅದರ ಇಕ್ಕೆಲಗಳಲ್ಲಿ ಒಂದಾದಮೇಲೊಂದರಂತೆ ಕಟ್ಟಲಾಗುತ್ತಿರುವ ಕಟ್ಟಡಗಳಿಂದಾಗಿ ಉಡುಪಿ ಮಣಿಪಾಲದ ಮಧ್ಯದ ಅಂತರ ಕಡಿಮೆಯಾಗುತ್ತಿರುವಂತೆ ಭಾಸವಾಗುತ್ತದೆ. ಅರ್ಥಾತ್ ಈ ಭಾಗದಲ್ಲಿ ವಾಹನಗಳ ಓಡಾಟವು ಹೆಚ್ಚುತ್ತಿದೆ. ಶ್ರೀ ಶಾರದ ಮಂಟಪಕ್ಕೆ ಈಗಾಗಲೇ ಸುಮಾರು ಇಪ್ಪತ್ತು ಸೆಂಟ್ಸ್ ಜಾಗದಷ್ಟು ಪಾರ್ಕಿಂಗ್ ಸ್ಥಳ ಇದ್ದರೂ ಸಮಾರಂಭದ ದಿನ ವಾಹನ ನಿಲುಗಡೆಗೆ ಪರದಾಡಬೇಕಾಗುತ್ತದೆ. ಶಾರದಾ ಮಂಟಪದ ಎದುರಿನ ರಸ್ತೆ ಅಗಲ ಕಿರಿದಾಗಿರುವುದರಿಂದ ಅಲ್ಲಿ ಪಾರ್ಕಿಂಗ್ ಮಾಡಲಾದ ವಾಹನಗಳಿಂದ ಇತರ ವಾಹನಗಳ ಓಡಾಟಕ್ಕೆ ತೊಂದರೆ ಯಾಗುತ್ತಿದ್ದುದು ಮಾತ್ರವಲ್ಲ ಪೋಲೀಸ ರಿಂದಲೂ ಹಾಗೂ ಪರಿಸರದವರಿಂದಲೂ ನಿತ್ಯವೂ ದೂರುಗಳು ಬರುತ್ತಿದ್ದವು. ಹಾಗಾಗಿ ನಾವು ಸೂಕ್ತ ಪಾರ್ಕಿಂಗ್ ಸ್ಥಳಕ್ಕಾಗಿ ಹುಡುಕಾಟ ನಡೆಸಿದ್ದೆವು.

ಇದೀಗ ಶಾರದಾ ಮಂಟಪದ ಬಳಿಯಲ್ಲಿಯೇ ಲಾಲಾ ಲಜಪತ್ ರಾಯ್ ರಸ್ತೆಯಲ್ಲಿ ಸುಮಾರು ಇಪ್ಪತ್ತು ಸೆಂಟ್ಸ್ ಸ್ಥಳವನ್ನು ಪಾರ್ಕಿಂಗ್‌ಗಾಗಿ ಬಾಡಿಗೆಗೆ ಪಡೆದು ಸುಮಾರು ಮೂವತ್ತು ವಾಹನಗಳನ್ನು ನಿಲ್ಲಿಸುವಷ್ಟು ವ್ಯವಸ್ಥೆ ಮಾಡಲಾಗಿದೆ. ಸಂಘದ ಉಪಯೋಗಕ್ಕಾಗಿ ನಮ್ಮ ಸಮಾಜ ಬಾಂಧವರಾದ ಬೈಂದೂರಿನಲ್ಲಿ ನೆಲೆಸಿರುವ ಶ್ರೀ ಶೇಷಪ್ಪಯ್ಯನವರು ತಮ್ಮ ಸ್ಥಳವನ್ನು ಇದಕ್ಕಾಗಿ ಒದಗಿಸಿ ಸಹಕರಿಸಿದ್ದಾರೆ. ಅವರಿಗೆ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್‌ರವರು ಕೃತಜ್ಞತೆಗಳನ್ನು ಅರ್ಪಿಸಿದ್ದಾರೆ. ಹಾಗೆಯೇ ಸಂಘದ ಅಭಿವೃದ್ಧಿಗೂ ಸಹಕರಿಸುತ್ತಿರುವ ನಮ್ಮೆಲ್ಲಾ ಸಮಾಜ ಬಾಂಧವರಿಗೆ ಇದರೊಂದಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ.

## ಯುವ ವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ನಮ್ಮ ಸಂಘದ ಯುವ ವೇದಿಕೆಯ ವತಿಯಿಂದ ನಮ್ಮ ಸಮಾಜ ಬಾಂಧವರಿಗೆ
ದಿನಾಂಕ 06–01–2019ನೇ ರವಿವಾರದಂದು
ಎಂ.ಜಿ.ಎಂ. ಕಾಲೇಜು, ಉಡುಪಿ ಇದರ ಕ್ರೀಡಾಂಗಣದಲ್ಲಿ

**ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2019**ನ್ನು

ಏರ್ಪಡಿಸಲಾಗಿದೆ.

ಮುಖ್ಯ ಅತಿಥಿಗಳು : ಶ್ರೀ ಪಿ. ಕೃಷ್ಣರಾಜ ರಾವ್, ಡಿಜಿಎಂ, ಕಾರ್ಪೋರೇಶನ್ ಬ್ಯಾಂಕ್ ಅಹಮದಾಬಾದ್

ಬಹುಮಾನಗಳ ಪ್ರಾಯೋಜಕರು :

- ಪ್ರಥಮ ಬಹುಮಾನ : ರೂ.10,000/- ಶ್ರೀ ಅಲೆವೂರು ಶ್ಯಾಮರಾಯರು ತಮ್ಮ ಮಾತಾಪಿತರಾದ ದಿ। ಶಾಂತಾ ಹಾಗೂ ದಿ। ಭುಜಂಗರಾಯರ ಸ್ಮರಣಾರ್ಥ
- ದ್ವಿತೀಯ ಬಹುಮಾನ : ರೂ.6,000/- ಶ್ರೀಮತಿ ಸುನಂದ ಸಿ.ಎಸ್.ರಾವ್, ಚಿಟ್ಪಾಡಿ
- ಸಮಾಧಾನಕರ ಬಹುಮಾನ : ಒಟ್ಟು ರೂ.4,000/-, ಶ್ರೀ ವೈ. ಭುವನೇಂದ್ರ ರಾಯರು ತಮ್ಮ ಮಾತಾಪಿತರಾದ ದಿ। ಗಿರಿಜಮ್ಮ ಹಾಗೂ ದಿ। ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕರ ಸ್ಮರಣಾರ್ಥ
- ಉತ್ತಮ ಬೌಲರ್, ಬ್ಯಾಟ್ಸ್‌ಮನ್ ಮತ್ತು ಆಲ್‌ರೌಂಡರ್ ಪುರಸ್ಕಾರ : ಒಟ್ಟು ರೂ.3,000/-, ಶ್ರೀ ಬಿ. ಜಯರಾಮ ರಾವ್

**ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಹಾಗೂ ಹಿರಿಯ ನಾಗರಿಕರಿಗೂ ಕ್ರಿಕೆಟ್ ಪಂದ್ಯಾಟ** ನಡೆಯಲಿದೆ.

ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

ಆಸಕ್ತ ತಂಡಗಳು ಮೆನೇಜರ್ ಶ್ರೀ ಅಜಿತ್ ರಾವ್ (0820-2520754), ಯುವವೇದಿಕೆಯ ಅಧ್ಯಕ್ಷರಾದ ಡಾ. ಸಂತೋಷ್ ರಾವ್ (9900411040), ಸಂಚಾಲಕರಾದ ತಂತ್ರಾಡಿ ಶ್ರೀ ವಿಶ್ವನಾಥ ಶ್ಯಾನುಭೋಗ್ (9741785551) ಅಥವಾ ಜತೆ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ (9449254846) ಇವರಲ್ಲಿ ತಮ್ಮ ತಂಡದ ಹೆಸರನ್ನು ದಿನಾಂಕ 31-12-2018ರ ಒಳಗೆ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ವಿಶೇಷ ಸೂಚನೆ :

1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ.
2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ.
3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು.

– ಅಧ್ಯಕ್ಷರು ಮತ್ತು ಸಂಚಾಲಕರು, ಯುವ ಮತ್ತು ಕ್ರೀಡಾ ವೇದಿಕೆ

## ಮಹಿಳಾ ವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ತಾ.06-01-2019ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 9-00ರಿಂದ
ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀ ಶಾರದಾ ಮಂಟಪದಲ್ಲಿ

**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆ**ಗಳನ್ನು

ಏರ್ಪಡಿಸಲಾಗಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ

– ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

## ಪ್ರವಾಸ :

ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ ಇದರ ಯುವ ಮತ್ತು ಕ್ರೀಡಾ ವೇದಿಕೆಯ ವತಿಯಿಂದ ತಾ.20-01-2019ರ ರವಿವಾರದಂದು ನೀಲಾವರ ದೇವಸ್ಥಾನ-ಗೋಶಾಲೆ-ಸೂರಾಲು ಅರಮನೆ, ಅಂಜಲಿ ವಾಟರ್ ಪಾರ್ಕ್ ಹಾಗೂ ಇನ್ನಿತರ ಆಕರ್ಷಕ ಸ್ಥಳಗಳಿಗೆ ಪ್ರವಾಸವನ್ನು ಆಯೋಜಿಸಲಾಗಿದೆ. ಬೆಳಿಗ್ಗೆ 8-00 ಗಂಟೆಗೆ ಶ್ರೀಶಾರದಾ ಮಂಟಪದಿಂದ ಹೊರಟು ಸಾಯಂಕಾಲ ವಾಪಾಸು ಬರಲಾಗುವುದು. ಪ್ರವಾಸ ಶುಲ್ಕ ಅಂದಾಜು ತಲಾ ರೂ.700/-.

ತಮ್ಮ ಹೆಸರುಗಳನ್ನು ತಾ.15-01-2019ರ ಮೊದಲು ಶ್ರೀಶಾರದಾ ಮಂಟಪದ ಮೆನೇಜರ್ ಶ್ರೀ ಅಜಿತ್ (0820-2520754), ಯುವ ವೇದಿಕೆಯ ಅಧ್ಯಕ್ಷ ಡಾ। ಸಂತೋಷ್ ರಾವ್ (9900411040) ಹಾಗೂ ಜತೆ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ (9449254846) ಇವರಲ್ಲಿ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಕಳೆದ ವರ್ಷ ಮೇ ತಿಂಗಳಲ್ಲಿ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ನಮ್ಮ ಸಮಾಜಕ್ಕೆ ಅತ್ಯಂತ ಉಪಯುಕ್ತವಾಗಬಲ್ಲಂತಹಾ ಕೊಡುಗೆಯೊಂದನ್ನು ಸಮರ್ಪಿಸಲಾಯಿತು. ಅದುವೇ ನಮ್ಮ ಸಮಾಜಬಾಂಧವರ ನಡುವೆ ಸಂಪರ್ಕಕ್ಕೆ ಉಪಯೋಗವಾಗಲೆಂದು ಸಿದ್ಧಪಡಿಸಿದ “ಸ್ಥಾನಿಕ” ಎಂಬ ಹೆಸರಿನ ಆಪ್. ಮೊಬೈಲ್ ಫೋನ್ ನಮ್ಮ ದಿನನಿತ್ಯದ ವ್ಯವಹಾರದ ಅವಿಭಾಜ್ಯ ಅಂಗವಾಗುತ್ತಿರುವ ಈ ದಿನಗಳಲ್ಲಿ ವಿಶ್ವದಾದ್ಯಂತ ನೆಲೆಸಿರುವ ನಮ್ಮ ಸಮಾಜಬಾಂಧವರೆಲ್ಲರ ವಿಳಾಸ ಹಾಗೂ ಇತರ ಮಾಹಿತಿಯನ್ನು ಕಲೆಹಾಕಿಟ್ಟುಕೊಂಡು, ಬೇಕಾದಾಗ ನಮಗೆ ಒದಗಿಸಬಲ್ಲ ಸಾಮರ್ಥ್ಯವಿರುವ ಮೊಬೈಲ್ ಆಪ್ ಇದು.

ಇಲ್ಲಿಯುತನಕ ನಾವು ನಮ್ಮ ಸಮಾಜಬಾಂಧವರ ವಿಳಾಸ ಅಥವಾ ಫೋನ್ ನಂಬ್ರ ತಿಳಿಯಬೇಕಾದರೆ ಆಯಾ ಪ್ರದೇಶದ ವಿಳಾಸ ಪುಸ್ತಕಕ್ಕೇ ಮೊರೆ ಹೋಗಬೇಕಿತ್ತು. ಆದರೆ ಎಷ್ಟೋ ಪ್ರದೇಶಗಳಲ್ಲಿ ವಿಳಾಸ ಪುಸ್ತಕದ ಸಂಗ್ರಹವೇ ಇಲ್ಲ. ಇನ್ನು ಅನೇಕ ಕಡೆಗಳಲ್ಲಿ ವಿಳಾಸ ಪುಸ್ತಕಗಳು ಪರಿಷ್ಕೃತವಾಗದೆ ವರ್ಷಗಳೇ ಕಳೆದಿವೆ. ಪದೇ ಪದೇ ಬದಲಾಗುತ್ತಿರುವ ವಿಳಾಸಗಳು ಇನ್ನೊಂದು ಸಮಸ್ಯೆ. ವಿಳಾಸ ಪುಸ್ತಕದಲ್ಲಿ ಹೆಚ್ಚು ಮಾಹಿತಿ ತುರುಕಿದರೆ ಅದನ್ನು ಹುಡುಕುವುದು ಇನ್ನೊಂದು ದೊಡ್ಡ ಸಮಸ್ಯೆ (ಕೆಲವೊಮ್ಮೆ ವಿಳಾಸ ಪುಸ್ತಕವನ್ನು ಹುಡುಕುವುದೇ ಸಮಸ್ಯೆ!). ವಿಳಾಸ ಪುಸ್ತಕದಲ್ಲಿ ಸಮಾಜಬಾಂಧವರನ್ನು ಸ್ಥಳವಾರು ವರ್ಗೀಕರಣ ಮಾಡಬಹುದು. ಆದರೆ ವೃತ್ತಿ, ಹವ್ಯಾಸ ಇತ್ಯಾದಿ ಆಧಾರದಲ್ಲಿ ವರ್ಗೀಕರಣ ಕಷ್ಟ. ಹೀಗೆ ವಿಳಾಸ ಪುಸ್ತಕದ ಇತಿಮಿತಿಗಳು ಹಲವಾರು. ಅದಕ್ಕೆ ವ್ಯತಿರಿಕ್ತವಾಗಿ ಯಾವತ್ತೂ ಅಂಗೈಯಲ್ಲಿಯೇ ಇರುವ ಮೊಬೈಲ್‌ನಲ್ಲಿ ವಿಶ್ವದಾದ್ಯಂತ ಇರುವ ನಮ್ಮ ಸಮಾಜ ಬಾಂಧವರ ಹೆಸರು, ವಿಳಾಸ, ವಿದ್ಯಾರ್ಹತೆ, ವೃತ್ತಿ, ಕೆಲಸ ಮಾಡುತ್ತಿರುವ ಸಂಸ್ಥೆ ಹಾಗೂ ಹವ್ಯಾಸ ಇತ್ಯಾದಿಗಳ ಮಾಹಿತಿಯನ್ನು ಕ್ಷಣಾರ್ಧದಲ್ಲಿ ಹುಡುಕಿ ನೀಡುವ ಆಪ್ ಇದು. ಈ ಆಪ್‌ನಿಂದ ನೀವು ವಿಶ್ವಾದಾದ್ಯಂತ ಇರುವ ನಮ್ಮವರ ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು ಹೆಸರು ಪ್ರಕಾರ, ವೃತ್ತಿ ಪ್ರಕಾರ, ಊರಿನ ಪ್ರಕಾರ, ಹವ್ಯಾಸದ ಪ್ರಕಾರ, ಕೆಲಸ ಮಾಡುತ್ತಿರುವ ಯಾ ಕಲಿಯುತ್ತಿರುವ ಸಂಸ್ಥೆಯ ಪ್ರಕಾರ ಕ್ಷಣಾರ್ಧದಲ್ಲಿ ಪಡೆಯಬಹುದು.

ಯಾವುದೋ ವಿದೇಶಕ್ಕೆ ನೀವು ನಿಮ್ಮ ಮಗನನ್ನೋ ಮಗಳನ್ನೋ ಮೊದಲ ಬಾರಿಗೆ ಕಳುಹಿಸುತ್ತಿದ್ದೀರೆಂದು ಭಾವಿಸಿಕೊಳ್ಳಿ. ಅಗತ್ಯ ಬಿದ್ದಾಗ ಸಹಾಯಕ್ಕೆ ನಿಮಗೆ ಆ ದೇಶದಲ್ಲಿ ನಮ್ಮವರು ಯಾರಿದ್ದಾರೆ ಎಂದು ತಿಳಿಯಬೇಕೆ? ನಿಮ್ಮ ಮಗ ಯಾ ಮಗಳು ಯಾವುದೋ ಕಾಲೇಜಿನಲ್ಲಿ ಕಲಿಯುತ್ತಿದ್ದಾರೆಯೇ? ನೀವು ಈಗಾಗಲೆ ಆ ಸಂಸ್ಥೆಯಲ್ಲಿ ಕಲಿಯುತ್ತಿರುವ ಅಥವಾ ಕೆಲಸಮಾಡುತ್ತಿರುವ ನಮ್ಮವರ ಬಗ್ಗೆ ತಿಳಿಯಬೇಕೆ?. ನಿಮಗೆ ಯಾವುದೋ ಒಂದು ಸಂಸ್ಥೆಯಲ್ಲಿ ಹೊಸದಾಗಿ ಕೆಲಸ ಸಿಕ್ಕಿದೆಯೆ? ನಿಮಗೆ ಅದರಲ್ಲಿ ನಮ್ಮವರು ಬೇರೆ ಯಾರಿದ್ದಾರೆ ಎಂದು ತಿಳಿಯುವ ಕುತೂಹಲವಿದೆಯೆ? ನೀವು ಯಾವುದೋ ಗೊತ್ತಿಲ್ಲದ ಊರಿಗೆ ಸ್ಥಳಾಂತರಗೊಳ್ಳುತ್ತಿದ್ದೀರಾ? ನಿಮಗೆ ಆ ಊರಿನಲ್ಲಿ ನಮ್ಮವರು ಯಾರಾದರೂ ಇದ್ದಾರಾ ಎಂದು ತಿಳಿಯಬೇಕೆ? ನೀವು ಎಲ್ಲಿಗೋ ಪ್ರವಾಸ ಹೋದಾಗ ಉಳಕೊಳ್ಳಲು ಒಳ್ಳೆಯ ಹೋಟೆಲು ಬೇಕೆ? ಅಲ್ಲಿರುವ ನಮ್ಮವರ ಹೋಟೇಲುಗಳ ಬಗ್ಗೆ ತಿಳಿಯಬೇಕೆ? ಅಥವಾ ಪ್ರವಾಸ ಹೋದಾಗ ಖಾಯಿಲೆ ಬಿದ್ದಿರೋ? ನಮ್ಮವರು ಯಾರಾದರೂ ವೈದ್ಯರ ಸಹಾಯ ಬೇಕೆ? ಅಥವಾ ನಿಮ್ಮದೇ ಊರಿನಲ್ಲಿ ಯಾವುದಾದರೊಂದು ವೃತ್ತಿಯವರ ಸಹಾಯ ಬೇಕೆ? ಯಾವುದೋ ಆಫೀಸಿನಲ್ಲಿ ನಿಮ್ಮ ಕೆಲಸವಾಗದೇ ಒದ್ದಾಡುತ್ತಿದ್ದೀರಾ? ಆ ಆಫೀಸಿನಲ್ಲಿ ನಮ್ಮವರು ಯಾರಾದರು ಕೆಲಸ ಮಾಡುತ್ತಿದ್ದಿರಬಹುದಲ್ಲವೇ? ನಿಮ್ಮ ಹವ್ಯಾಸವನ್ನೇ ಹೊಂದಿರುವ ನಮ್ಮವರ ಪರಿಚಯವಾಗಬೇಕೆ? ಯಾವುದೋ ಊರಿನಲ್ಲಿದ್ದು ತುರ್ತಾಗಿ ರಕ್ತಕ್ಕಾಗಿ ಚಡಪಡಿಸುತ್ತಿದ್ದೀರಾ? ಆ ಊರಿನಲ್ಲಿನ ನಮ್ಮ ಸಮಾಜದ ರಕ್ತದಾನಿಗಳ ಲಿಸ್ಟ್ ಇದರಲ್ಲಿದೆ. ನಮ್ಮ ಸಮಾಜದ ಚಟುವಟಿಕೆಗಳ ಬಗ್ಗೆ ತಿಳಿಯಬೇಕೆ?, ನಮ್ಮ ಸಮಾಜಬಾಂಧವರಲ್ಲಿ ಲಭ್ಯವಿರುವ ಉದ್ಯೋಗಗಳ ಬಗ್ಗೆ ತಿಳಿಯಬೇಕೆ? ಪ್ರತಿಯೊಂದಕ್ಕೂ ಉತ್ತರ ಲಭ್ಯವಿದೆ ಈ ಆಪ್‌ನಲ್ಲಿ. ಹೀಗೆ ನಮ್ಮ ಸಮಾಜ ಬಾಂಧವರಿಗೆ ಹೆಜ್ಜೆ ಹೆಜ್ಜೆಗೂ ಉಪಯುಕ್ತವಾಗಬಲ್ಲ ಆಪ್ ಇದು.

ಹೀಗೆ ಈ ಆಪ್ ನಮ್ಮ ಸಮಾಜಬಾಂಧವರಿಗೆ ಬಹೂಪಯೋಗಿ ಎನ್ನುವುದರಲ್ಲಿ ಸಂಶಯವೇ ಇಲ್ಲ. ಆದರೆ ಇಷ್ಟೊಂದು ಸಾಮರ್ಥ್ಯವನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಈ ಆಪ್ ಯಶಸ್ವಿಯಾಗಬೇಕಾದರೆ ಪ್ರತಿಯೊಬ್ಬ ಸ್ಥಾನಿಕನ ಮಾಹಿತಿ ಇದರಲ್ಲಿರಬೇಕು. ವಿಶ್ವದಾದ್ಯಂತ ಇರುವ ನಮ್ಮವರ ಮಾಹಿತಿಯನ್ನು ಒಬ್ಬರಿಂದ ಸಂಗ್ರಹಿಸಿ ತುಂಬುವುದು ಅಸಾಧ್ಯ. ಹಾಗಾಗಿ ಅವರವರ ಮಾಹಿತಿಯನ್ನು ತುಂಬುವ ಜವಾಬ್ದಾರಿಯನ್ನು ಅವರವರಿಗೆ ವಹಿಸಿದೆ. ಒಂದು ಮನೆಯಲ್ಲಿ ಯಾರಾದರೊಬ್ಬರು ಇತರರೆಲ್ಲರ ಮಾಹಿತಿಯನ್ನು ತುಂಬಿಸಲು ಸಾಧ್ಯವಿದೆ. ಈ ಮಾಹಿತಿಯು ವಿಳಾಸ ಪುಸ್ತಕದಂತೆ ಮನೆಯ ಯಜಮಾನ ಕೇಂದ್ರೀಕೃತವಲ್ಲ, ಬದಲಾಗಿ ವ್ಯಕ್ತಿ ಕೇಂದ್ರೀಕೃತವಾಗಿದೆ (ಒಂದು ಮನೆಯ ಪ್ರತಿಯೊಬ್ಬರೂ ತಮ್ಮ ಮಾಹಿತಿ ನೀಡಬೇಕು)ಈ ಆಪ್ ಸ್ಥಾನಿಕ ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿರುವುದರಿಂದ ಪರಿಶೀಲನೆಗೋಸ್ಕರ ನೊಂದಾಯಿಸುವವರ ತಂದೆಯ, ತಾಯಿಯ, ಕುಟುಂಬದ ಹೆಸರು ಕೇಳಲಾಗಿದೆಯೇ ಹೊರತು ಇತರರಿಗೆ ಕೇವಲ ಹೆಸರು, ವಿಳಾಸ, ಸಂಪರ್ಕ ಸಂಖ್ಯೆ ಮಾತ್ರ ಲಭ್ಯವಾಗುತ್ತದೆ. ನೋಂದಾಯಿಸಿದವರನ್ನು ಈ ಆಪ್‌ನ ಮೇಲ್ವಿಚಾರಕರು ನಮ್ಮವರೇ ಎಂದು ಗುರುತಿಸುವ ತನಕ ಅವರಿಗೆ ಈ ಆಪನ್ನು ಬಳಸಲು ಸಾಧ್ಯವಾಗುವುದಿಲ್ಲ. ತಮ್ಮ ವಿಳಾಸ ಬದಲಾದಾಗ ತಾವೇ ಸ್ವತ: ಆಪ್‌ನಲ್ಲಿರುವ ಮಾಹಿತಿಯನ್ನು ಬದಲಾಯಿಸಿಕೊಳ್ಳಬಹುದು. ಅಂತರ್ಜಾಲದಲ್ಲಿ ಪ್ರತಿಷ್ಠಿತ ಕಂಪೆನಿಯ ಸಹಯೋಗದಲ್ಲಿ ಈ ಮಾಹಿತಿಯನ್ನು ಕೂಡಿಡಲಾಗುತ್ತಿದೆ. ಈ ಆಪ್ ಸದ್ಯ ಆಂಡ್ರಾಯ್ಡ್ ಮೊಬೈಲಿಗೆ ಮಾತ್ರಾ ಲಭ್ಯವಿದೆ. ಪ್ಲೇ ಸ್ಟೋರ್ ನಿಂದ ಉಚಿತವಾಗಿ STHANIKA ಎಂಬ ಈ ಹೆಸರನ್ನು ಟೈಪ್ ಮಾಡಿ ಹುಡುಕಿ ವರ್ಗಾಯಿಸಿಕೊಳ್ಳಬಹುದು. ಈ ಆಪ್ ನ್ನು ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಪ್ರಾಯೋಜಿಸಿದೆ. ಎಲ್ಲೂರು ಕುಟುಂಬದ ಶ್ರೀ ಅಜಿತ್ ಮತ್ತು ಅರ್ಚನ ದಂಪತಿಗಳು ಈ ಆಪ್ ನ್ನು ನಮಗಾಗಿ ಉಚಿತವಾಗಿ ಸಿದ್ಧಪಡಿಸಿದ್ದಾರೆ. ಇವಿಷ್ಟು ಈ ಆಪ್ ನ ಬಗ್ಗೆ ವಿವರಗಳು.

ಕಳೆದ ಒಂದು ವರ್ಷದಲ್ಲಿ ಸಾವಿರಕ್ಕೂ ಹೆಚ್ಚು ಜನ ನಮ್ಮವರು ಈ ಆಪ್ ನಲ್ಲಿ ತಮ್ಮ ಮಾಹಿತಿಯನ್ನು ತುಂಬಿದ್ದಾರೆ. ಆದರೆ ಸುಮಾರು ಐವತ್ತು ಸಾವಿರದಷ್ಟು ಜನಸಂಖ್ಯೆಯು ನಮ್ಮ ಸಮಾಜದಲ್ಲಿ ಸಾವಿರದ ಆಸುಪಾಸಿನ ಸಂಖ್ಯೆಯು ನೊಂದಾವಣೆ ತುಂಬಾ ಕಡಿಮೆಯಾಯಿತು. ಹೀಗಾಗಿ ಬಹೂಪಯೋಗಿಯಾದೀತು ಎಂದು ಭಾವಿಸಿದ್ದ ಈ ಆಪ್‌ಗೆ ನಿರೀಕ್ಷಿಸಿದಷ್ಟು ಜನ ಸ್ಪಂದನೆ ಸಿಗಲಿಲ್ಲ ಎಂದೇ ಹೇಳಬೇಕಾಗುತ್ತದೆ. ಪ್ರಚಾರದ ಕೊರತೆ, ಸ್ಮಾರ್ಟ್‌ಫೋನ್ ಇಲ್ಲದಿರುವುದು, ಅಂತರ್ಜಾಲ ಬಳಸಲು ಗೊತ್ತಿಲ್ಲದಿರುವುದು, ಸಮಯದ ಅಭಾವ, ನಮ್ಮವರೇ ಎಂದು ಪರಿಶೀಲಿಸಲು ಇಟ್ಟ ಸೂತ್ರಗಳು ಹೀಗೆ ಅನೇಕ ಕಾರಣಗಳನ್ನು ಊಹಿಸಿದ್ದೇವೆ. ಏನೇ ಇದ್ದರೂ ಈ ಆಪ್ ಯಶಸ್ವಿಯಾದರೆ ನಮ್ಮವರಿಗೆ ಅದರಿಂದ ಹೇರಳವಾದ ಉಪಯೋಗವಿರುವುದರಿಂದ ಪ್ರತಿಯೊಬ್ಬರೂ, ಕನಿಷ್ಟ ಒಂದು ಮನೆಯಲ್ಲಿ ಒಬ್ಬರಾದರೂ ಆಸಕ್ತಿ ವಹಿಸಿ, ತಮ್ಮ ಸ್ವಲ್ಪ ಸಮಯವನ್ನು ಮೀಸಲಾಗಿಟ್ಟು ತಮ್ಮ ಮಾಹಿತಿಯನ್ನು ಹಾಗೂ ತಮ್ಮ ಮನೆಯವರ ಮಾಹಿತಿಯನ್ನು ಈ ಆಪ್ ನಲ್ಲಿ ತಪ್ಪುಗಳಿಲ್ಲದಂತೆ ತುಂಬಿಸಬೇಕು ಹಾಗೂ ಒಬ್ಬರು ಇನ್ನೊಬ್ಬರನ್ನು ಹುರಿದುಂಬಿಸಿ ತಮ್ಮ ಮಾಹಿತಿಯನ್ನು ದಾಖಲಿಸಲು ಪ್ರೋತ್ಸಾಹಿಸಿ ಇದಕ್ಕೆ ನಾವಿಟ್ಟಿರುವ “ಸ್ಥಾನಿಕರ ವಿಶ್ವಕೋಶ” ಎಂಬ ಹೆಸರನ್ನು ನಿಜಗೊಳಿಸುವಂತೆ ಸಹಕರಿಸಬೇಕೆಂದು ವಿನಂತಿ.

**ಸಂಪಾದಕ ಮಂಡಳಿ**
ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging




ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ

ಆದರದ ಸ್ವಾಗತ ಬಯಸುವ


ಹೋಟೇಲ್ ವೃಂದಾವನ, ಕದ್ರಿ, ಮಂಗಳೂರು | ವಿನೀತ್ ಮೆಡಿಕಲ್ಸ್, ಪಡುಬಿದ್ರಿ | ವಿಶ್ವ ಟ್ರಾನ್ಸ್‌ಪೋರ್ಟ್, ಮಂಗಳೂರು | ಶ್ರೀಮತಿ ಮಧುರಾ ವ್ಯಾಸರಾಜ್ ರಾವ್, ಶ್ರೀ ಧವಳ ಎಲ್ಲೂರು

ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.

ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ

ವಿಶಾಲ ಪಾರ್ಕಿಂಗ್ ವ್ಯವಸ್ಥೆ



## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ), ಸುರತ್ಕಲ್

**13–19 ಶ್ರೀರಮಣ, ಎನ್.ಐ.ಟಿ.ಕೆ ಎದುರು, ಶ್ರೀನಿವಾಸನಗರ, ಸುರತ್ಕಲ್–575025.**

ಪ್ರಿಯ ಬಾಂಧವರೇ, ದಿ : 24–11–2018

ನಮ್ಮ ಸಂಘದ ಯುವ ವೇದಿಕೆಯ ವತಿಯಿಂದ ಇದೇ ದಿನಾಂಕ 13–01–2019 ನೇ ರವಿವಾರದಂದು

**ನವ ಮಂಗಳೂರು ಬಂದರು ಮಂಡಳಿ (N.M.P.T), ಪಣಂಬೂರಿನ ಕ್ರೀಡಾಂಗಣದಲ್ಲಿ 5 ನೇ ವರ್ಷದ**

### ಶ್ರೀ ಸುಬ್ರಹ್ಮಣ್ಯ ಟ್ರೋಫಿ

**ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯಾಟವನ್ನು**

ನಮ್ಮ ಸಮಾಜ ಬಾಂಧವರಿಗೆ ಏರ್ಪಡಿಸಲಾಗಿದೆ.

ಕ್ರೀಡಾಕೂಟವು ಬೆಳಿಗ್ಗೆ ಘಂಟೆ 8 ಕ್ಕೆ ಆರಂಭವಾಗಲಿದ್ದು, ತಾವು ತಮ್ಮ ತಂಡದ ಸದಸ್ಯರೊಂದಿಗೆ ಆ ದಿನ ಬೆಳಿಗ್ಗೆ 7.30 ರೊಳಗೆ ಆಗಮಿಸಿ ತಮ್ಮ ತಂಡದ ಇರುವಿಕೆಯನ್ನು ಧೃಡೀಕರಿಸುವಂತೆ ಕೇಳಿಕೊಳ್ಳಲಾಗಿದೆ.

ಈ ಪಂದ್ಯಾಟವು ನಮ್ಮ ಸಮಾಜದ ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ನಮ್ಮ ಸಮಾಜದ ಯುವಕರು ಮಾತ್ರ ಪಾಲ್ಗೊಳ್ಳುವಂತೆ ಕೋರಲಾಗಿದೆ.

ಈ ಪಂದ್ಯಾಟದಲ್ಲಿ ಭಾಗವಹಿಸುವ ತಂಡಗಳು 31–12–2018 ರೊಳಗೆ ಪ್ರವೇಶ ಪತ್ರವನ್ನು ಕಳುಹಿಸಿ, ಅಥವಾ ಈ ಕೆಳಗಿನ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಬೇಕಾಗಿ ವಿನಂತಿಸಲಾಗಿದೆ.

**1) ಶ್ರೀ ಕಾರ್ತಿಕ್ ರಾವ್ (9591662899)**
**2) ಶ್ರೀ ಶಿವಪ್ರಸಾದ್ ರಾವ್ (8105946640) 3) ಶ್ರೀ ಪ್ರವೀಣ್ ರಾವ್ (944895331)**

**: ಪಂದ್ಯಾಟದ ನಿಯಮಾವಳಿಗಳು :**

- ಈ ಪಂದ್ಯಾಟವು ಸೀಮಿತ ಓವರಿನಿಂದ ಕೂಡಿದ್ದು ಓವರ್ ಆರ್ಮ್ ಬೌಲಿಂಗ್ ಆಗಿರುತ್ತದೆ.
- ತಂಡದಲ್ಲಿ ಕಡ್ಡಾಯವಾಗಿ ಸಮಾಜ ಬಾಂಧವರ ಯುವಕರಿಗೆ ಮಾತ್ರ ಅವಕಾಶ, ಬೇರೆ ಸದಸ್ಯರು ಕಂಡು ಬಂದಲ್ಲಿ ಆ ತಂಡವನ್ನು ಪಂದ್ಯಾಕೂಟದಿಂದ ಅನರ್ಹಗೊಳಿಸಲಾಗುವುದು.
- ನಿರ್ಣಾಯಕರ ತೀರ್ಮಾನವೇ ಅಂತಿಮ ತೀರ್ಮಾನ.
- ಪಂದ್ಯಾಟದಲ್ಲಿ ಟೆನ್ನಿಸ್ ಬಾಲನ್ನು ಉಪಯೋಗಿಸಲಾಗುವುದು.

– ಅಧ್ಯಕ್ಷರು ಮತ್ತು ಸದಸ್ಯರು
ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ), ಸುರತ್ಕಲ್

## ಸುರತ್ಕಲ್ ಸಂಘದ ಮಹಾಸಭೆ

ದಿನಾಂಕ 04.11.2018ನೇ ರವಿವಾರ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ), ಸುರತ್ಕಲ್ ಇದರ ವಾರ್ಷಿಕ ಮಹಾಸಭೆಯು ಗೋವಿಂದದಾಸ ಕಾಲೇಜು, ಸುರತ್ಕಲ್ ಇಲ್ಲಿನ ಸಭಾಂಗಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ.ಮಾಧವ ರಾವ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀನಿವಾಸ ಮೆಡಿಕಲ್ ಕಾಲೇಜು ಹಾಗೂ ಶ್ರೀನಿವಾಸ ಆಸ್ಪತ್ರೆಯ ಡೀನ್ ಆಗಿರುವ ಶ್ರೀ ಉದಯ ಕುಮಾರ್ ಏಳಿಂಜೆ, ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಉಡುಪಿ ನಗರಸಭಾ ಸದಸ್ಯೆ ಶ್ರೀಮತಿ ರಜನಿ ಹೆಬ್ಬಾರ್ ಕರ್ನಾಟಕ ಬ್ಯಾಂಕಿನ ಜನರಲ್ ಮ್ಯಾನೇಜರಾದ ಶ್ರೀ ಬಿ. ಚಂದ್ರಶೇಖರ್ ರಾವ್, ಎಂ.ಸಿ.ಎಫ್ ಕಾರ್ಖಾನೆಯ ನಿರ್ದೇಶಕರಾದ ಶ್ರೀ ಕೆ. ಪ್ರಭಾಕರ ರಾವ್ ಅಗಮಿಸಿದ್ದರು. ಸಂಘದ ಗೌರವಾಧ್ಯಕ್ಷರಾದ ಶ್ರೀ ಎಂ. ಭವಾನಿಶಂಕರ ರಾವ್, ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭೋಗ್ ಹಾಗೂ ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಯವರಾದ ಶ್ರೀ ಎಂ. ಪಾಲಚಂದ್ರ ಶರ್ಮ ಜೊತೆ ಕಾರ್ಯದರ್ಶಿಯವರಾದ ಶ್ರೀ ಸುಕುಮಾರ್, ಶ್ರೀ ಶಿವಪ್ರಸಾದ್ ಶಾನುಭೋಗ್ ಮುಂತಾದ ಗಣ್ಯರು ಉಪಸ್ಥಿತರಿದ್ದರು. ಅಂತೆಯೇ ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಪರಿಮಳಾ ಪ್ರಶಾಂತ್, ಕಾರ್ಯದರ್ಶಿಯವರಾದ ಶ್ರೀಮತಿ ವೀಣಾ ಮತ್ತು ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಸಂಕೇತ್ ಶಾನುಭೋಗ್ ಉಪಸ್ಥಿತರಿದ್ದರು. ಕು। ವಿಭಾ ರಾವ್ ಮತ್ತು ಕು। ಅಂಕಿತಾ ಪ್ರಾರ್ಥನೆಯನ್ನು ನಡೆಸಿಕೊಟ್ಟರು. ಶ್ರೀ ಮಾಧವ ರಾವ್ ಬಂದಿರುವ ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಪಾಲಚಂದ್ರ ಶರ್ಮರು ವಾರ್ಷಿಕ ಮಹಾಸಭೆಯ ನೋಟೀಸನ್ನು ಮತ್ತು ವಾರ್ಷಿಕ ವರದಿಯನ್ನು ಓದಿ ಸಭೆಯಿಂದ ಅಂಗೀಕಾರ ಪಡೆದರು. ಕೋಶಾಧಿಕಾರಿಗಳಾದ ಶ್ರೀ ಸಿ.ರಾಘವೇಂದ್ರ ರಾವ್ ಇವರು ಸಂಘದ ಆಯ ವ್ಯಯ ಮತ್ತು ಆಸ್ತಿ ಜವಾಬ್ದಾರಿ ತಖ್ತೆಗಳ ಪರಿಶೋಧಿತ ವರದಿಯನ್ನು ಮಂಡಿಸಿ ಸಭೆಯಿಂದ ಅಂಗೀಕಾರವನ್ನು ಪಡೆದರು. ಮುಂದಿನ ವರ್ಷಕ್ಕಾಗಿ ಭಟ್ ಮತ್ತು ಶರ್ಮರನ್ನು ಲೆಕ್ಕ ಪರಿಶೋಧಕರನ್ನಾಗಿ ನೇಮಕ ಮಾಡಲಾಯಿತು.

ನಂತರ ನಡೆದ ನಮ್ಮ ಸಮಾಜದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಖ್ಯಾತ ಎಲುಬು ತಜ್ಞ ಶ್ರೀ ಪ್ರಶಾಂತ್ ಮೋಹನ್, ಅಭ್ಯಾಸ ಕ್ಷೇತ್ರ, ವಾಸ್ತು ಕ್ಷೇತ್ರ, ಜ್ಯೋತಿಶಾಸ್ತ್ರದಲ್ಲಿ ಸಾಧನೆಗೈದ ಶ್ರೀ ರಾಜಾರಾಮ್ ರಾವ್ ಕಟೀಲ್, ಶಿಕ್ಷಕ ವೃತ್ತಿಯಲ್ಲಿ ಸಾಧನೆಗೈದು ಇದೀಗ ವಿಶ್ರಾಂತ ಜೀವನ ನಡೆಸುತ್ತಿರುವ ಶ್ರೀಮತಿ ಕುಸುಮಾ ಮಾಧವ ರಾವ್, ನಿವೃತ್ತ ಮುಖ್ಯೋಪಾಧ್ಯಾಯಿನಿ, ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್ ಹಾಗೂ ಶ್ರೀಮತಿ ಸುಕನ್ಯಾ ಹರೀಶ್ಚಂದ್ರ ರಾವ್ ಇವರನ್ನು ಶಾಲು ಹೊದಿಸಿ ಫಲಪುಷ್ಪವನ್ನಿತ್ತು ಗೌರವಿಸಲಾಯಿತು.

ಬಳಿಕ ಎಸ್.ಎಸ್.ಎಲ್.ಸಿ, ಪದವಿ ಪೂರ್ವ, ಡಿಪ್ಲೋಮಾ ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್, ಬಿ.ಇಡಿ ಹಾಗೂ ಎಂ.ಡಿ.ಎಸ್ ವಿದ್ಯಾರ್ಥಿಗಳಿಗೆ ಶ್ರೀ ದಯಾನಂದ ಎಸ್. ರಾವ್ ಸ್ಮಾರಕ ಎಜ್ಯುಕೇಶನಲ್ ಟ್ರಸ್ಟ್, ಕೆ.ಪ್ರಭಾಕರ್ ರಾವ್ ಮುಂತಾದ ಇತರ ಮಹನೀಯರು ವಿದ್ಯಾನಿಧಿಗೆ ನೀಡಿರುವ ಮೊತ್ತ ಹಾಗೂ ಅದರ ಬಡ್ಡಿಯಿಂದ ಬರುವ ಹಣದಿಂದ ಸುಮಾರು 23 ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡಿ ಪ್ರೋತ್ಸಾಹಿಸಲಾಯಿತು.

(7ನೇ ಪುಟಕ್ಕೆ...)


## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ.

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
**ಯೆಲೆಸ್ವೀ ಎಂಟರ್‌ಪ್ರೈಸೆಸ್**
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

N. Laxmi Prasad

ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

## ಶ್ರೀ ತ್ರಿಶೂಲಿನೀ ದುರ್ಗಾಪರಮೇಶ್ವರೀ ದೇವಸ್ಥಾನ

ಬಳ್ಪ, ಸುಳ್ಯ ತಾಲೂಕು, ದ.ಕ.ಜಿಲ್ಲೆ

ಪ್ರಿಯ ಭಕ್ತಾಭಿಮಾನಿಗಳೇ,

*ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯವರ್ಯೇತ್ಯಾದಿ ಅನೇಕ ಬಿರುದಾವಲೀ ಭೂಷಿತರಾದ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾಪೀಠಾಧೀಶ್ವರ ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ* ***ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್ಕರಕಮಲ ಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿದಾನಂಗಳವರ*** *ಪರಮಾನುಗ್ರಹಪುರಸ್ಸರ ಆಶೀರ್ವಾದಗಳಿಂದ*

ಸ್ವಸ್ತೀ ಶ್ರೀ ಶಾಲಿವಾಹನ ಶಕವರ್ಷ 1940ನೇ ವಿಲಂಬಿ ನಾಮ ಸಂವತ್ಸರದ ಮಾರ್ಗಶಿರ ಕೃಷ್ಣ ಅಷ್ಟಮಿ ದಿನಾಂಕ 29.12.2018 ಶನಿವಾರ

### ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ವಾರ್ಷಿಕೋತ್ಸವ

ಮತ್ತು ಸ್ವಸ್ತೀ ಶ್ರೀ ಶಾಲಿವಾಹನ ಶಕವರ್ಷ 1940 ನೇ ವಿಲಂಬಿ ನಾಮ ಸಂವತ್ಸರದ ಮಾರ್ಗಶಿರ ಕೃಷ್ಣ ದಶಮಿ

**ತಾ.31.12.2018 ಸೋಮವಾರದಿಂದ ದ್ವಾದಶಿ 02.01.2019 ಬುಧವಾರ ಪರ್ಯಂತ**

### ಶ್ರೀ ತ್ರಿಶೂಲಿನೀ ದುರ್ಗಾಪರಮೇಶ್ವರೀ ಅಮ್ಮನವರ ಬ್ರಹ್ಮರಥೋತ್ಸವ

ಕಾರ್ಯಕ್ರಮಗಳು ಶ್ರೀ ಗುರು ದೇವತಾನುಗ್ರಹದಿಂದ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಜರಗಲಿರುವುದು.

ತಾವೆಲ್ಲರೂ ಈ ಉತ್ಸವಗಳಲ್ಲಿ ಭಾಗವಹಿಸಿ ಶ್ರೀ ದೇವರ ಪ್ರಸಾದ ಸ್ವೀಕರಿಸಿ ಅಮ್ಮನವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ,

**–ಆಡಳಿತ ಮಂಡಳಿ**

---

॥ ಶ್ರೀ ಬಾಲರೂಪೀ ಗಣಪತಿಃ ಪ್ರಸೀದತು ॥
॥ ಶ್ರೀ ಮಾತಾ ಪಾರ್ವತೀ ಅನುಗೃಹ್ಣಾತು ॥

### ಶ್ರೀ ಕ್ಷೇತ್ರ ಉದಯಾದ್ರಿ

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ

ಪಡುಬಿದ್ರಿ, ಉಡುಪಿ ಜಿಲ್ಲೆ–574111

ಭಕ್ತಾಭಿಮಾನಿಗಳೇ,

ದಿನಾಂಕ 22–12–2018ನೇ ಮಾರ್ಗಶಿರ ದತ್ತ ಹುಣ್ಣಿಮೆಯಿಂದ ದಿನಾಂಕ 5–1–2018ನೇ ಎಳ್ಳಮಾವಾಸ್ಯೆಯವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರಗಲಿದ್ದು ತಾವೆಲ್ಲರೂ ಭಾಗವಹಿಸಿ ಶ್ರೀದೇವರ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿಸುತ್ತೇವೆ.

**ದಿನಾಂಕ 22–12–2018ರಿಂದ ದಿನಾಂಕ 5–1–2019ರ ತನಕ**

**ಪ್ರತೀದಿನ ರಾತ್ರಿ ಗಂಟೆ 7–00ಕ್ಕೆ**

### ಶ್ರೀ ಬಾಲಗಣಪತಿ ದೇವರಿಗೆ ಸಾರ್ವಜನಿಕ ರಂಗಪೂಜಾ ಸೇವೆ

**ದಿನಾಂಕ 5–1–2019ನೇ ಶನಿವಾರದಂದು ಬೆಳಿಗ್ಗೆ ಗಂಟೆ 8–00ಕ್ಕೆ**

### ಅಥರ್ವ ಶೀರ್ಷ ಸಹಸ್ರಮೋದಕ ಯಾಗ

**ದಿನಾಂಕ 5–1–2019ನೇ ಶನಿವಾರದಂದು**

### ಎಳ್ಳಮಾವಾಸ್ಯೆ ಜಾತ್ರಾ ವರ್ಷಾವಧಿ ಉತ್ಸವ

**–: ತಮಗೆಲ್ಲರಿಗೂ ಆದರದ ಸ್ವಾಗತ :–**

| | | |
|---|---|---|
| **ಜಗದಾಭಿರಾಮ ಸ್ವಾಮಿ**<br>ಪ್ರಧಾನ ಅರ್ಚಕರು | **ಪಿ.ರಘುವೀರ ರಾವ್**<br>ಅಧ್ಯಕ್ಷರು | **ಕರುಣಾಕರ್ ಬೆಳ್ಳೆ**<br>ಗೌರವ ಅಧ್ಯಕ್ಷರು |
| **ಶ್ರೀನಿವಾಸ ಶರ್ಮ, ಪಾದೆಬೆಟ್ಟು**<br>ಕಾರ್ಯದರ್ಶಿ | | **ಪಿ.ಡಿ. ಶೇಖರ ರಾವ್**<br>ಖಜಾಂಚಿ |

**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಟೆಂಪಲ್ ಟ್ರಸ್ಟ್ (ರಿ.) ಮತ್ತು ಸರ್ವಸದಸ್ಯರು,**

**ತಾ. 5–1–2019ರಂದು ಎಳ್ಳಮವಾಸ್ಯೆ ಜಾತ್ರೆಯಂದು ನಡೆಯುವ ಕಾರ್ಯಕ್ರಮಗಳ ವಿವರ**

| | |
|---|---|
| ಬೆಳಿಗ್ಗೆ ಗಂಟೆ 9.00ಗಂಟೆಗೆ | ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ |
| ಬೆಳಿಗ್ಗೆ ಗಂಟೆ 9.30ಕ್ಕೆ | ವಿಜಯವಲ್ಲಿ ರಾವ್ ಹೆಜಮಾಡಿ ಇವರಿಂದ – ಭಕ್ತಿಗಾಯನ |
| ಬೆಳಿಗ್ಗೆ ಗಂಟೆ 10.00ರಿಂದ | ವಿವಿಧ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ |

---

॥ ಶ್ರೀ ಮಹಾಗಣಪತಯೇ ನಮಃ ॥ ॥ ಶ್ರೀ ಸುಬ್ರಹ್ಮಣ್ಯಃ ಪ್ರಸೀದತು ॥

## ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ

ಭಗವದ್ಭಕ್ತರೇ, ಕೊಕ್ರಾಡಿ, ತಾ25.10.2018

*ಸ್ವಸ್ತಿ! ಶ್ರೀ ಶ್ರೀ ಪರಮಹಂಸ ಪರಿವ್ರಾಜಕಾಚಾರ್ಯವರ್ಯೇತಿ ಬಿರುದಾಂಕಿತ ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ ಹಾಗೂ ತತ್ಕರಕಮಲ ಸಂಜಾತ ಶ್ರೀ ಶ್ರೀ ವಿಧುಶೇಖರಭಾರತೀ ಸ್ವಾಮಿಗಳವರ ಪರಮಾನುಗ್ರಹದಿಂದ*

**ಪುಷ್ಯ ಶುದ್ಧ ಷಷ್ಠಿ ದಿನಾಂಕ 12–01–2019ನೇ ಶನಿವಾರದಂದು**

### ಕಿರುಷಷ್ಠಿ ಉತ್ಸವವು

ಸಂಪನ್ನಗೊಳ್ಳಲಿರುವುದು.

ಈ ಪ್ರಯುಕ್ತ ಭಕ್ತಾಭಿಮಾನಿಗಳಾದ ತಾವೆಲ್ಲರೂ ಈ ದೇವತಾ ಕಾರ್ಯಕ್ರಮದಲ್ಲಿ ಭಾಗವಹಿಸಿ, ತನು, ಮನು, ಧನಗಳೊಂದಿಗೆ ಸಹಕರಿಸಿ, ಶ್ರೀಮುಡಿಗಂಧ ಪ್ರಸಾದವನ್ನು ಸ್ವೀಕರಿಸಿ, ಭಗವತ್ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

| | |
|---|---|
| **ಅರ್ಚಕರು ಅನುವಂಶಿಕ ಆಡಳಿತದಾರರು**<br>**ಮತ್ತು ಊರ ಭಕ್ತ ಜನರು** | **ಧರ್ಮದರ್ಶಿಗಳು**<br>ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ದತ್ತಿ ಸಂಸ್ಥೆ |

**ವಿಶೇಷ ಕಾರ್ಯಕ್ರಮಗಳು : ಪೂರ್ವಾಹ್ನ ಪಂಚಾಮೃತ ಅಭಿಷೇಕ, ಪವಮಾನ ಅಭಿಷೇಕ, ಶ್ರೀ ರುದ್ರಾಭಿಷೇಕ, ಶ್ರೀ ಸುಬ್ರಹ್ಮಣ್ಯ ಹೋಮ, ಮಹಾಪೂಜೆ, ಅನ್ನಸಂತರ್ಪಣೆ. ಸಾಯಂ. ರಂಗಪೂಜೆ**

**ಮೀನ ಮಾಸ ದಿನ ೨೫ ಸಲುವ ದಿನಾಂಕ 8–4–2019ನೇ ಸೋಮವಾರದಂದು**

**ಪ್ರತಿಷ್ಠಾ ದಿನೋತ್ಸವವು** ಸಂಪನ್ನಗೊಳ್ಳಲಿದೆ.

---

॥ ಶ್ರೀ ಮಾಸ್ತಿದುರ್ಗಾ ಪ್ರಸನ್ನಃ ॥

## ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನ, ಧರ್ಮಶಾಲೆ

ಹನೆಹಳ್ಳಿ ಗ್ರಾಮ, ಬಾರಕೂರು–576210, ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ

ಭಕ್ತಾಭಿಮಾನಿಗಳೇ,

**ಶ್ರೀ ಮಾಸ್ತಿ ಅಮ್ಮನವರ ಸನ್ನಿಧಿಯಲ್ಲಿ**

### ವಾರ್ಷಿಕೋತ್ಸವ ಮತ್ತು ಢಕ್ಕೆ ಬಲಿ ಸೇವೆ ಹಾಗೂ ಮಹಾ ಅನ್ನಸಂತರ್ಪಣೆಯು

ದಿನಾಂಕ 16–12–2018ನೇ ಆದಿತ್ಯವಾರದಿಂದ ದಿನಾಂಕ 18–12–2018ನೇ ಮಂಗಳವಾರದವರೆಗೆ ನೆರವೇರಲಿದ್ದು, ತಾವೆಲ್ಲರೂ ಅಗಮಿಸಿ, ಶ್ರೀದೇವರ ಗಂಧಪ್ರಸಾದವನ್ನು ಸ್ವೀಕರಿಸಬೇಕಾಗಿ ವಿನಂತಿ.

**– ಆಡಳಿತ ಮಂಡಳಿ**

---

### ಶ್ರೀಶಾರದಾ ವೇದಿಕೆ – ಪ್ರಕಟಣೆ

**ಪತ್ರಿಕೆಯ ವಿಳಾಸ : ಸಂಪಾದಕರು, ಶ್ರೀ ಶಾರದ ಪತ್ರಿಕೆ, ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576 102.**
**ಇ–ಮೇಯ್ಲ್ : srisharadaudupi@gmail.com**
**ವೈಬ್‌ಸೆಟ್ : www.srisharada.org ವಾಟ್ಸ್ ಆ್ಯಪ್ ನಂಬ್ರ : 9845136322**
**ಶಾರದ ಮಂಟಪದ ಮ್ಯಾನೇಜರ್ : 0820–2520754, 9448108920**

### ಶ್ರೀಶಾರದಾ ವೇದಿಕೆಗೆ ಸದಸ್ಯತನ ಶುಲ್ಕ

ಆಜೀವ ಸದಸ್ಯರು : ರೂ.500/–, ದಾನಿಗಳು : ರೂ.1000/–,
ಪೋಷಕರು : ರೂ.5000/–, ಮಹಾಪೋಷಕರು : ರೂ.10000/–

**ಜಾಹೀರಾತುದರ**

| | | |
|---|---|---|
| ಕಲರ್ ಪುಟದ 1/3ನೇ ಭಾಗ 12 ತಿಂಗಳುಗಳಿಗೆ | : | ರೂ.12000/– |
| ಕಲರ್ ಪುಟದ 1/8ನೇ ಭಾಗ ಶುಭಾಶಯ ಇತ್ಯಾದಿ | | |
| ಜಾಹೀರಾತು ಒಂದುಬಾರಿಗೆ | : | ರೂ.1000/– |
| ಕಪ್ಪು ಬಿಳುಪು ಪುಟದ 1/8ನೇ ಭಾಗ ಶುಭಾಶಯ ಇತ್ಯಾದಿ | | |
| ಜಾಹೀರಾತು ಒಂದು ಬಾರಿಗೆ | : | ರೂ.500/– |
| ಕಪ್ಪು ಬಿಳುಪು ಪುಟದ 2 ಇಂಚು 2 ಕಾಲಂ 12 ತಿಂಗಳುಗಳಿಗೆ | : | ರೂ.1500/– |

ಈ ಶುಲ್ಕವನ್ನು ತಮ್ಮ ಹೆಸರು ವಿಳಾಸದೊಂದಿಗೆ, ನಗದು, ಚೆಕ್ ಅಥವಾ ಡಿ.ಡಿ. ಮುಖಾಂತರ ಸಲ್ಲಿಸಬಹುದು ಅಥವಾ ಕರ್ನಾಟಕ ಬ್ಯಾಂಕ್, ಕುಂಜಿಬೆಟ್ಟು ಬ್ರಾಂಚ್, ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಮಾಡಿ ಅದರ ರಶೀದಿಯನ್ನು ಮೇಲಿನ ನಮ್ಮ ಇ–ಮೇಯ್ಲ್/ವಾಟ್ಸ್ಆ್ಯಪ್ ವಿಳಾಸಕ್ಕೆ ಕಳುಹಿಸಬಹುದು. ಖಾತೆಯ ಹೆಸರು **ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ, ಖಾತೆಸಂಖ್ಯೆ : 80325001028816O1 at Karnataka Bank, Kunjibettu Branch, Udupi IFSC Code KARB0000803**

**ಸಮಾಜ ಬಾಂಧವರು ಪತ್ರಿಕೆಯನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸುವಂತೆ ವಿನಂತಿ**

## ಶುಭ ವಿವಾಹ

ತಂತ್ರಾಡಿ ಕೃಷ್ಣರಾಜರಾಯರ ಸುಪುತ್ರ **ಚಿ। ವಿಖ್ಯಾತ್**‌ನ ವಿವಾಹವು ಕಂಚಾರು ಕೇಶವ ಭಟ್ಟರ ಪುತ್ರಿ **ಚಿ। ಸೌ। ಮಾಧುರಿ**ಯೊಂದಿಗೆ ತಾ.19–10–2018 ರಂದು ಉಡುಪಿ ಶ್ರೀ ಗೋವಿಂದ ಕಲ್ಯಾಣಮಂಟಪದಲ್ಲಿ ಜರುಗಿತು.

**** ****

ಶ್ರೀಮತಿ ಶಶಿಕಲಾ ಮತ್ತು ಶ್ರೀ ಕಿರಣ್ ಶಾಸ್ತ್ರಿ ಇವರ ಪುತ್ರಿ **ಚಿ। ಸೌ। ನಿಧಿಶ್ರೀ** ಮತ್ತು ಶ್ರೀಮತಿ ಅನುರಾಧಾ ಹಾಗೂ ಶ್ರೀ ವೆಂಕಟೇಶ್ ಕೆ.ಜಿ. ಇವರ ಪುತ್ರ **ಚಿ। ತೇಜಸ್** ಇವರ ವಿವಾಹವು ತಾ.09–11–2018ರಂದು ಮಂಗಳೂರಿನ ಗೋಕುಲ ಕಲ್ಯಾಣ ಮಂಟಪದಲ್ಲಿ ನೆರವೇರಿತು.

**** ****

ನೆಲ್ಲಿಕುಂಜ ಡಾ। ಮೇಘಶ್ಯಾಮ ಹಾಗೂ ಶ್ರೀಮತಿ ಗಾಯತ್ರಿಯವರ ಪುತ್ರ **ಚಿ। ಶಶಾಂಕ್** ಮತ್ತು ಮಂದಾರ್ತಿ ಶ್ರೀ ನಾಗರಾಜ ರಾವ್ ಹಾಗೂ ಶ್ರೀಮತಿ ಕಲಾವತಿ ಇವರ ಪುತ್ರಿ **ಚಿ। ಸೌ। ಚೈತ್ರಾ** ಇವರ ವಿವಾಹವು ತಾ.09–12–2018ರಂದು ಉಡುಪಿ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

## ಶುಭ ಜನನ

ಉಡುಪಿ ಕರಂಬಳ್ಳಿಯ ಶ್ರೀ ಮೋಹನ್ ರಾವ್ ದಂಪತಿಗಳ ಪುತ್ರಿ ಶ್ವೇತಾ ಹಾಗೂ ಹೆಬ್ಬೂರು ಶ್ರೀ ಶ್ರೀಗಳ ಆಪ್ತ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯರಾಯರ ಪುತ್ರ ನವೀನ್ ರಾಜ್‌ರಿಗೆ ತಾ.31–10–2018ರಂದು ಹೆಣ್ಣುಮಗುವಿನ ಜನನ.

## ಷಷ್ಟ್ಯಬ್ದಿ ಶಾಂತಿ

ಉಡುಪಿಯ ಗುಂಡಿಬೈಲಿನ ಶ್ರೀ ಪ್ರಕಾಶ್ ಭಾಗವತ್‌ರವರು ತಮಗೆ ಅರವತ್ತು ವರ್ಷಗಳು ಪೂರ್ತಿಯಾದುದರ ಪ್ರಯುಕ್ತ ಷಷ್ಟ್ಯಬ್ದಿ ಶಾಂತಿಯನ್ನು ಪತ್ನಿ ಶ್ರೀಮತಿ ಜಯಲಕ್ಷ್ಮೀ ಹಾಗೂ ಕುಟುಂಬದವರೊಂದಿಗೆ ಉಡುಪಿಯ ಶ್ರೀ ರಾಘವೇಂದ್ರ ಮಠದಲ್ಲಿ ತಾ.11–11–2018ರಂದು ಆಚರಿಸಿದರು.

## ನಿಧನ


### ಕೆ. ಶಿವಶಂಕರ ರಾಯರು



ಪಡುಬಿದ್ರೆಯಲ್ಲಿದ್ದ ದಿವಂಗತ ಶ್ರೀ ಕೆ. ಪದ್ಮನಾಭ ಶಾಸ್ತ್ರಿಯವರ ಪಂಚಮಪುತ್ರ ಮೈಸೂರಲ್ಲಿ ವಾಸವಾಗಿದ್ದ ಶ್ರೀ ಕೆ. ಶಿವಶಂಕರ ರಾಯರು ಅಲ್ಪಕಾಲದ ಅಸೌಖ್ಯದಿಂದ ತಾರೀಖು 1–12–2018 ರಂದು ನಿಧನ ಹೊಂದಿರುತ್ತಾರೆ. ಇವರಿಗೆ 58 ವರ್ಷ ಪ್ರಾಯವಾಗಿದ್ದು ಪತ್ನಿ ಎರಡು ಪುತ್ರರು, ಸೊಸೆಯಂದಿರು ಮತ್ತು ಒಬ್ಬಳು ಮೊಮ್ಮಗಳನ್ನು ಅಗಲಿರುತ್ತಾರೆ. ಇವರ ಆತ್ಮಕ್ಕೆ ಶ್ರೀ ಶಾರದಾಂಬೆಯು ಚಿರಶಾಂತಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ. ಇವರು ಅಲೆವೂರಲ್ಲಿ ವಾಸವಾಗಿರುವ ಶ್ರೀ.ಕೆ ದೇವರಾಯ ಶಾಸ್ತ್ರಿಯವರ ಸಹೋದರರಾಗಿರುತ್ತಾರೆ.

**** ****

### ಶ್ರೀ ಶೈಲೇಶ್ ರಾವ್



ಮುಂಡ್ಕೂರಿನ ಪ್ರಸಿದ್ಧ ಪಾಕತಜ್ಞ ಶ್ರೀ ಯೋಗೀಶರಾಯರ ಪುತ್ರ ಶ್ರೀ ಶೈಲೇಶ್ ರಾವ್ ಇವರು ತಾ 04–12–2018 ರಂದು ಕೇರಳ ಪ್ರವಾಸಕ್ಕೆ ತೆರಳಿದ ಸಂದರ್ಭದಲ್ಲಿ ರೈಲು ಅಫಘಾತಕ್ಕೆ ಸಿಲುಕಿ ನಿಧನ ಹೊಂದಿದರು. ಶ್ರೀಯುತರು ಸಿವಿಲ್ ಇಂಜಿನಿಯರ್ ಆಗಿದ್ದು ದುಬಾಯಿಯಲ್ಲಿ ವೃತ್ತಿಯಲ್ಲಿದ್ದರು. ರಜೆಯಲ್ಲಿ ಊರಿಗೆ ಬಂದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿತ್ತು. ಪಡುಬಿದ್ರೆ ಸಂಘದ ಸಕ್ರಿಯ ಕಾರ್ಯಕರ್ತರಾಗಿದ್ದ ಶ್ರೀಯುತರ ನಿಧನಕ್ಕೆ ಶ್ರೀ ಶಾರದಾ ಬಳಗವು ಸಂತಾಪ ಸೂಚಿಸುತ್ತಾ ಕುಟುಂಬದವರಿಗೆ ಅವರ ಅಗಲಿಕೆಯನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**** ****

### ಶ್ರೀಮತಿ ಸರೋಜಿನಿ



ದಿ। ಅತ್ತೂರು ಸುಬ್ರಹ್ಮಣ್ಯ ರಾವ್ ಇವರ ಧರ್ಮಪತ್ನಿ ಶ್ರೀಮತಿ ಸರೋಜಿನಿಯವರು ತಾ.12–11–2018ರ ಸೋಮವಾರ ಸ್ವರ್ಗಹದಲ್ಲಿ ನಿಧನ ಹೊಂದಿದರು. ಅವರು ಪುತ್ರ, ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

## ಕೋಟೆಕಾರಿನಲ್ಲಿ ನವರಾತ್ರಿ ಸಂಭ್ರಮ

ಕೋಟೆಕಾರಿನ ಶೃಂಗೇರಿ ಶಾಖಾ ಮಠದಲ್ಲಿ ತಾ.10–10–2018ರಿಂದ 19–10–2018ರ ತನಕ ವಿವಿಧ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನವರಾತ್ರಿ ಆಚರಣೆಯು ವಿಜೃಂಭಣೆಯಿಂದ ನೆರವೇರಿತು. ಮಠದ ಧರ್ಮಾಧಿಕಾರಿಗಳಾದ ಶ್ರೀ ಸತ್ಯಶಂಕರ ಬೊಳ್ಳಾವರವರ ನೇತೃತ್ವದಲ್ಲಿ ಎಲ್ಲಾ ಕಾರ್ಯಕ್ರಮಗಳು ಜರಗಿದವು. ದ.ಕ ಜಿಲ್ಲೆಯ ಹಲವಾರು ಸಂಘ ಸಂಸ್ಥೆಗಳು ಭಾಗವಹಿಸಿದ್ದವು.

## ಬಾರೋ ನಮ್ಮ ಮನೆಗೆ

ಬಾರೋ ನಮ್ಮ ಮನೆಗೆ......
ಶ್ರೀ ಸುಬ್ರಹ್ಮಣ್ಯ ....
ತೋರೋ ಕರುಣೆ ಯೆಮಗೆ ॥ಪಲ್ಲವಿ॥

1. ಬಾರೋ ಬಾರೋ ನಮ್ಮ ಮನೆಗೆ
ತೋರೋ ನಿನ್ನಯ ಕರುಣೆಯೆಮಗೇ
ತಾರೋ ಶುಭವನು ಸಕಲರಿಗೆ
ಭವತಾರಕನೆ ಬಿನ್ನಹವ ಮಾಡುವೆ ॥೧॥
ಬಾರೋ ನಮ್ಮ ಮನೆಗೇ ಶ್ರೀ ಸುಬ್ರಹ್ಮಣ್ಯ

2. ಪರಶಿವನ ವರಪುತ್ರನೆ ಶುಭಗಾತ್ರನೇ
ಸುರಸೈನ್ಯ ದಧಿಪತಿಯೇ
ತಾರಕಾಸುರನನ್ನು ಮಡುಹಿದ
ಧೀರನೇ ಸುಕುಮಾರ ಶೂರನೆ
ಮಾರಹರಸುತ ನಿನ್ನ ಭಜಿಸುವೆ
ಜ್ಞಾನ ಪಥ ತೋರೆನುತ ಬೇಡುವೆ
ಬಾರೋ ನಮ್ಮ ಮನೆಗೇ...ಶ್ರೀ ಸುಬ್ರಹ್ಮಣ್ಯ ॥೨॥

3. ಋಷಿಮುನಿ ವಂದಿತನೇ ಸುರಪೂಜಿತನೆ
ಅಸುರರ ಹಂತಕನೇ
ಕಾರ್ತಿಕೇಯನೇ ಗೌರಿಪುತ್ರನೇ
ಆರ್ತಜನ ಸಂರಕ್ಷಕನೇ ಶ್ರೀ
ಕ್ಷಾತ್ರತೇಜನೇ ಮೋಕ್ಷಪಥವನು
ತೋರೆನುತ ಆಶ್ರಿತನು ಬೇಡುವೆ
ಬಾರೋ ನಮ್ಮ ಮನೆಗೇ...ಶ್ರೀ ಸುಬ್ರಹ್ಮಣ್ಯ ॥೩॥

4. ಎಲ್ಲೆಲ್ಲು ಅರಸಿದೆನು ವಲ್ಲೀಶನನ್ನು
ಇಲ್ಲಿಯೇ ಕಂಡಿಹೆನು
ಮಲ್ಲವದನೆ ಮಲಿಂದ ಸುತೆ ಶ್ರೀ
ವಲ್ಲಿಯನು ಒಲವಿಂದ ವರಿಸಿದ
ಬಲ್ಲಿದನು ಬಂದಿಹನು ಕೊಡಿಗೆಯ
ಮಂದಿರದಿ ನಿಂದಿಹನು ಕಂಡೆನು ॥೪॥
ಬಾರೋ ನಮ್ಮ ಮನೆಗೇ......
ಶ್ರೀ ಸುಬ್ರಹ್ಮಣ್ಯ ....

– ಅಪಯಶ ಬೆಂಗಳೂರು




ಎಮ್. ದೇವಾನಂದ್ ಭಟ್ Cell : 9845644556 9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

SAMPATH KUMAR Mobile : 9741508881
TRISHULINI TOURIST
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

Ph : 98459 92859
CA Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

Buying and selling shares as easy as checking your emails
Sharekhan Online Trading Account Features:
Your bank account gets directly linked to trading account
Can do direct fund transfer from any of 11 leading banks
Choose your trading account, Classic, FastTrade, TradeTiger
Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
Visit : www.sharekhan.com

## ಭರತನಾಟ್ಯ ಮತ್ತು ಸಂಗೀತ ಸೀನಿಯರ್ ವಿಭಾಗದಲ್ಲಿ ತೇರ್ಗಡೆ



ಕರ್ನಾಟಕ ಸರಕಾರದ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸಿದ 2017ನೇ ಸಾಲಿನ ಭರತನಾಟ್ಯ ಪರೀಕ್ಷೆಯ ಸೀನಿಯರ್ ವಿಭಾಗದಲ್ಲಿ ಕು. ಗಾನ ಪಿಲಿಂಜರವರು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಹಾಗೂ 2018 ನೇ ವರ್ಷದಲ್ಲಿ ನಡೆದ ಕರ್ನಾಟಕ ಶಾಸ್ತ್ರೀಯ ವಿಭಾಗದ ಸೀನಿಯರ್ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದ ಇವರು ನೃತ್ಯ ಗುರುಗಳಾದ ವಿದೂಷಿ ಶ್ರೀಮತಿ ಡಾ.ಶ್ರುತಿ ರೋಷನ್ ಹಾಗೂ ಸಂಗೀತ ಗುರುಗಳಾದ ವಿದುಷಿ ಶ್ರೀಮತಿ ವೀಣಾ ರಾಘವೇಂದ್ರ ಇವರ ಶಿಷ್ಯೆ. ಇವರು ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ ಅಧ್ಯಯನ ಮಾಡುತ್ತಿದ್ದಾರೆ ಪುತ್ತೂರಿನ ನೆಹರು ನಗರದಲ್ಲಿ ವಾಸ್ತವ್ಯದಲ್ಲಿರುವ ಮಂಗಳಾ ಡೆಕೋರೇಟರ್ಸ್ ಮೋಹನ್‌ದಾಸ್ ಪಿಲಿಂಜ ಹಾಗೂ ಗಾಯತ್ರಿ ಪಿಲಿಂಜ ಇವರ ಪುತ್ರಿ.

## ಆಳ್ವಾಸ್ ನುಡಿಸಿರಿಯಲ್ಲಿ ಕು|ದಿಶಾ ಪಿ.ರಾವ್‌ರವರ ವೀಣಾ ವಾದನ



ಇತ್ತೀಚೆಗೆ ಮೂಡಬಿದ್ರೆಯ ಅಳ್ವಾಸ್ ನುಡಿಸಿರಿ 2018 ಕಾರ್ಯಕ್ರಮದಲ್ಲಿ ದಿನಾಂಕ 18-11-2018ರಂದು ಉಡುಪಿಯ ಶ್ರೀ ಪ್ರಕಾಶ್ ರಾವ್ ಇವರ ಪುತ್ರಿ ಕುಮಾರಿ ದಿಶಾರವರು ವೀಣಾ ವಾದನ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು. ಕೀಬೋರ್ಡ್‌ನಲ್ಲಿ ಶ್ರೀ ಪ್ರಕಾಶ್ ರಾವ್, ತಬಲಾದಲ್ಲಿ ಶ್ರೀ ಮಾಧವ ಆಚಾರ್ಯ, ಗಿಟಾರ್‌ನಲ್ಲಿ ಶ್ರೀ ಶರತ್ ಪಾವಂಜೆ, ರಿದಂ ಪ್ಯಾಡ್‌ನಲ್ಲಿ ಶ್ರೀ ಕಾರ್ತಿರ್ ಇನ್ನಂಜೆ ಸಹಕರಿಸಿದರು.

## ಶ್ರೀ ಮ.ನಾ. ಹೆಬ್ಬಾರ್‌ರಿಗೆ ಸನ್ಮಾನ




ಉಡುಪಿ ಹಿರಿಯ ನಾಗರಿಕರ ಸಂಸ್ಥೆಯ ಆಶ್ರಯದಲ್ಲಿ ಅಜ್ಜರಕಾಡು ಯೋಗ ವೇದಿಕೆಯಲ್ಲಿ ದಿನಾಂಕ 06-12-2018ರಂದು ಸಂಜೆ ಹರಿದಾಸ ಶ್ರೀ ಮ.ನಾ ಹೆಬ್ಬಾರರಿಂದ 'ಭಕ್ತ ಚಂದ್ರಹಾಸ' ವೆಂಬ ಹರಿಕಥೆ ಜರಗಿತು. ಆರಂಭದಲ್ಲಿ ಗೌರವಾಧ್ಯಕ್ಷ ಶ್ರೀ ಎ.ಪಿ ಕೊಡಂಚರವರು ಸ್ವಾಗತಿಸಿ ಅಧ್ಯಕ್ಷರಾದ ಶ್ರೀ ಸಿ.ಎಸ್. ರಾವ್‌ರವರು ಹರಿದಾಸರನ್ನು ಪರಿಚಯಿಸಿದರು. ಪಕ್ಕವಾದ್ಯದಲ್ಲಿ ಶ್ರೀ.ಕೆ ಶ್ರೀನಿವಾಸರಾಯರು ಹಾರ್ಮೋನಿಯಂನಲ್ಲಿಯೂ, ಶ್ರೀಮಂಜಪ್ಪನವರು ತಬಲಾದಲ್ಲಿಯೂ ಸಹಕರಿಸಿದರು. ಕೊನೆಯಲ್ಲಿ ಹರಿದಾಸರನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು. ಶ್ರೀಮತಿ ಮಾಲತಿ ತಂತ್ರಿ ಇವರು ಕಾರ್ಯಕ್ರಮ ನಿರೂಪಿಸಿದರು.

## ಪಾಕೇಟ್ ಕ್ಯಾಲೆಂಡರ್ 2019

| | | | | | ಜನವರಿ-31 ಅಕ್ಟೋಬರ್-31 | ಮೇ-31 | ಆಗಸ್ಟ್-31 | ಫೆಬ್ರವರಿ-28 ಮಾರ್ಚ್-31 ನವೆಂಬರ್-30 | ಜೂನ್-30 | ಸೆಪ್ಟೆಂಬರ್-30 ಡಿಸೆಂಬರ್-31 | ಏಪ್ರಿಲ್-30 ಜುಲೈ-31 |
|---|---|---|---|---|---|---|---|---|---|---|---|
| 1 | 8 | 15 | 22 | 29 | ಮಂಗಳ | ಬುಧ | ಗುರು | ಶುಕ್ರ | ಶನಿ | ಆದಿತ್ಯ | ಸೋಮ |
| 2 | 9 | 16 | 23 | 30 | ಬುಧ | ಗುರು | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ |
| 3 | 10 | 17 | 24 | 31 | ಗುರು | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ | ಬುಧ |
| 4 | 11 | 18 | 25 | ★ | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ | ಬುಧ | ಗುರು |
| 5 | 12 | 19 | 26 | ★ | ಶನಿ | ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ |
| 6 | 13 | 20 | 27 | ★ | ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
| 7 | 14 | 21 | 28 | ★ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ | ಆದಿತ್ಯ |

01-01-2020 : ಬುಧವಾರ

ರಚನೆ : ಮ.ಮ. ಹೆಬ್ಬಾರ್, ಬೇಳಂಜೆ




## ಆರ್ಥಿಕತೆ

ಆರ್ಥಿಕತೆಯನ್ನು ಬಲ್ಲ ಪಂಡಿತನು ನಾನಲ್ಲ
ಬೆಲೆಏರಿಕೆ ಒಂದುಳಿದು ನನಗೇನೂ ತಿಳಿದಲ್ಲ

ಗ್ರಾಹಕ ಬೆಲೆ ಸೂಚ್ಯಂಕ (CPI) ವಂತೆ
ಸಗಟು ಬೆಲೆ ಸೂಚ್ಯಂಕ (WPI) ವಂತೆ
ಒಟ್ಟು ದೇಶಿಯ ಉತ್ಪನ್ನ (GDP) ವಂತೆ
ಒಂದನ್ನೂ ನಾ ಅರಿಯೆ

ಕೈಗಾರಿಕಾ ಉತ್ಪಾದನೆ, ಕೃಷಿ ಉತ್ಪಾದನೆಯಂತೆ
ತರಕಾರಿ, ಆಹಾರ, ಇಂಧನ-ಹಣದುಬ್ಬರವಂತೆ, ಬ್ಯಾಂಕ್ ಬಡ್ಡಿದರವಂತೆ,
ಡಿಮೊನಾಟೈಜೇಷನ್, ಜಿಎಸ್‌ಟಿ ಅಂತೆ, ರೇಪೋದರ, ರಿವರ್ಸ್ ರೇಪೋದರವಂತೆ
ಒಂದನ್ನೂ ನಾ ತಿಳಿಯೆ
ಹೌಹಾರಿದ್ದಾಳೆ ಗೃಹಿಣಿ ಅಡುಗೆಮನೆಯಲ್ಲಿ
ಬೆಲೆ ಏರಿಕೆಯ ಕಂಡು
ಕಂಗಾಲಾಗಿದ್ದಾಳೆ ತಿಂಗಳ ಬಜೆಟ್‌ನ
ಏರುಪೇರಿನ ಕಹಿ ಉಂಡು
ಬೇಕು ಬೆಲೆ ಏರಿಕೆಗೆ ಕಡಿವಾಣ
ಬೇಕು ಕಾಳಸಂತೆಗೆ ನಿಯಂತ್ರಣ
ಖರ್ಚು ಆಕಾಶದತ್ತ
ಉಳಿತಾಯ ಶೂನ್ಯದತ್ತ
ಇವೆರಡರ ಮಧ್ಯೆ ನಡೆದಿದೆ ನಿತ್ಯ ನಿರಂತರ
ಹೆಣಗಾಟ, ಹೋರಾಟ
ಆರ್ಥಿಕತೆಯನ್ನು ಬಲ್ಲ ಪಂಡಿತನು ನಾನಲ್ಲ
ಬೆಲೆ ಏರಿಕೆ ಒಂದುಳಿದು ನನಗೇನೂ ತಿಳಿದಿಲ್ಲ

-ಮಲ್ಲಿಕ್, ಉಳಿಯಾರು
ಸಂಪರ್ಕ : 994588508

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.25-12-2018 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.04-01-2019 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.27-12-2018 ಮತ್ತು ತಾ.11-01-2019 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಧನುರ್ಮಾಸದ ವಿಶೇಷ ದಿನಗಳು

| | | | |
|---|---|---|---|
| 16-12-2018 | ಧನು ಸಂಕ್ರಮಣ | 06-01-2019 | ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ ಮತ್ತು ಮಹಿಳಾ ಮತ್ತು ಮಕ್ಕಳ ಒಳಾಂಗಣ ಕ್ರೀಡೆಗಳು |
| 18-12-2018 | ಸ್ಮಾರ್ತೈಕಾದಶಿ | 07-01-2019 | ಹೇಮಂತ ಋತು, ಪುಷ್ಯ ಮಾಸದ ಶುಕ್ಲಪಕ್ಷಾರಂಭ |
| 19-12-2018 | ಭಾಗವತ-ವೈಷ್ಣವೈಕಾದಶಿ | 09-01-2019 | ಉಡುಪಿ ಸಪ್ತೋತ್ಸವ ಆರಂಭ |
| 22-12-2018 | ಹುಣ್ಣಿಮೆ | 14-01-2019 | ಮಕರ ಸಂಕ್ರಮಣ |
| 23-12-2018 | ಹೇಮಂತ ಋತು, ಮಾರ್ಗಶಿರ ಮಾಸದ ಕೃಷ್ಣಪಕ್ಷಾರಂಭ | 15-01-2019 | ಉತ್ತರಾಯಣ ಪುಣ್ಯಕಾಲ ಉಡುಪಿ ಚೂರ್ಣೋತ್ಸವ |
| 25-12-2018 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.04 | 17-01-2019 | ಸರ್ವೈಕಾದಶಿ |
| 01-01-2019 | ಹೊಸವರ್ಷ 2019 ಆರಂಭ ಸರ್ವೈಕಾದಶಿ | 20-01-2019 | ಪ್ರವಾಸ |
| 05-01-2019 | ಎಳ್ಳಮಾವಾಸ್ಯೆ | | |

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ

ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ

ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. – ಆಡಳಿತ ಮಂಡಳಿ

## ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ

ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363

## ಸುರತ್ಕಲ್ ಸಂಘದ ಮಹಾಸಭೆ

(..3ನೇ ಪುಟದಿಂದ)



ಈ ಸಂದರ್ಭದಲ್ಲಿ ದಿ.ವೆಂಕಟ್ರಮಣ ಶಾನುಭೋಗ್ ಹಾಗೂ ದಿ.ಸುಲೋಚನ ಮಲ್ಲಮಾರು ಇವರ ಸ್ಮರಣಾರ್ಥ ಇವರ ಪುತ್ರ ಶ್ರೀ ಲಕ್ಷ್ಮೀ ನಾರಾಯಣ ಶಾನುಭೋಗ್ ಪತ್ನಿ ಶ್ರೀಮತಿ ಜಯಲಕ್ಷ್ಮೀ, ಪುತ್ರ ಅನ್ವೇಷ್ ಶಾನುಭೋಗ್ ರವರು ಸಂಘದ ವಿದ್ಯಾರ್ಥಿ ನಿಧಿಗೆ ರೂ.1,00,000/– ಗಳನ್ನು ನೀಡಿರುತ್ತಾರೆ. ಇವರನ್ನು ಶಾಲು ಹೊದಿಸಿ ಗುಲಾಬಿ ಹೂ ನೀಡಿ ಗೌರವಿಸಲಾಯಿತು.

ನಂತರ ಮುಖ್ಯ ಅತಿಥಿಗಳಾದ ಶ್ರೀ ಉದಯಕುಮಾರ್ ಏಳಿಂಜೆ, ಶ್ರೀ ಮಂಜುನಾಥ ಹೆಬ್ಬಾರ್, ಶ್ರೀಮತಿ ರಜನಿ.ಎಂ, ಶ್ರೀ.ಕೆ. ಪ್ರಭಾಕರ ರಾವ್, ಶ್ರೀ. ಬಿ. ಚಂದ್ರಶೇಖರ ರಾವ್‌ರವರು ಸಮಾಜದ ಯುವ ಪೀಳಿಗೆ ಯಾವ ರೀತಿ ಕಾರ್ಯಪ್ರವೃತ್ತ ರಾಗಬೇಕೆಂದು ತಮ್ಮ ಮಾತುಗಳಲ್ಲಿ ತಿಳಿಸಿದರು. ಸಭಾಧ್ಯಕ್ಷರಾದ ಶ್ರೀ.ಕೆ. ಮಾಧವ ರಾಯರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮಕ್ಕೆ ಆಗಮಿಸಿ ಸಭೆಯ ಯಶಸ್ಸಿಗೆ ಕಾರಣಕರ್ತರಾದ ಎಲ್ಲರಿಗೂ ಅಭಿನಂದಿಸಿ, ಮುಂದೆಯೂ ಇದೇ ರೀತಿಯ ಸಹಕಾರವನ್ನು ಬಯಸಿದರು.

ಬಳಿಕ ಯುವ ವೇದಿಕೆ ಹಾಗೂ ಮಹಿಳಾ ವೇದಿಕೆಯನ್ನು ಪುನರ್‌ರಚಿಸಲಾಯಿತು. ಮಹಿಳಾ ವೇದಿಕೆಯ ಪದಾಧಿಕಾರಿಗಳಲ್ಲಿ ಹೆಚ್ಚಿನ ಬದಲಾವಣೆ ಮಾಡದೆ ಸಣ್ಣ ಬದಲಾವಣೆಯೊಂದಿಗೆ ಅದೇ ಸಮಿತಿ ಯನ್ನು ಮುಂದುವರಿಸಲಾಯಿತು. ಯುವ ವೇದಿಕೆಯನ್ನು ಪೂರ್ಣ ಪ್ರಮಾಣದಲ್ಲಿ ಬದಲಾಯಿಸಿ ರಚಿಸಲಾಯಿತು. ಯುವ ವೇದಿಕೆಯ ಅಧ್ಯಕ್ಷರಾಗಿ ಶ್ರೀಸುಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಕಾರ್ತಿಕ್, ಕಾರ್ಯದರ್ಶಿಯವರಾಗಿ ಸಂಕೇತ್ ಶಾನುಭೋಗ್ ಚುನಾಯಿತರಾದರು.

ಬಳಿಕ ನಮ್ಮ ಸಮಾಜದ ಪುಟಾಣಿಗಳಿಂದ ಹಾಗೂ ಮಹಿಳಾ ವೇದಿಕೆಯ ಸದಸ್ಯರಿಂದ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಈ ಕಾರ್ಯಕ್ರಮಗಳು ಎಲ್ಲರನ್ನು ರಂಜಿಸಿತು. ಈ ಕಾರ್ಯಕ್ರಮಕ್ಕೆ ಪಡುಬಿದ್ರಿ, ಉಡುಪಿ ಹಾಗೂ ಮೂಡಬಿದರೆ ಸಂಘದ ಅಧ್ಯಕ್ಷರು, ಸದಸ್ಯರು ಆಗಮಿಸಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ರಾಘವೇಂದ್ರ ರಾವ್, ಶ್ರೀಮತಿ ಕುಸುಮ ಮಾಧವರಾವ್, ಕು। ಅರ್ಪಿತ ನೆರವೇರಿಸಿದ್ದರು. ಶ್ರೀ ವಾಸುದೇವ ಶಾನುಭೋಗ್ ಧನ್ಯವಾದವಿತ್ತರು. ಭೋಜನದ ಬಳಿಕ ಕಾರ್ಯಕ್ರಮವು ಮುಕ್ತಾಯವಾಯಿತು.

## ಶ್ರೀ ಶಾರದಾ ಭಜನಾಮಂಡಳಿಯಿಂದ ಕಾರ್ಯಕ್ರಮ



ನಮ್ಮ ಶ್ರೀ ಶಾರದಾ ದೇವಸ್ಥಾನದ ಶ್ರೀ ಶಾರದಾ ಭಜನಾಮಂಡಳಿಯು ಸಕ್ರಿಯವಾಗಿದ್ದು ನವರಾತ್ರಿಯ ಸಂದರ್ಭದಲ್ಲಿ ಕೊಲ್ಲೂರು, ನೀಲಾವರ, ಅಂಬಲ್ಪಾಡಿ ಹಾಗೂ ಕಡಿಯಾಳಿ ದೇವಸ್ಥಾನಗಳಲ್ಲಿ ಭಜನಾ ಕಾರ್ಯಕ್ರಮ ನೀಡಿತ್ತು. ಹಾಗೆಯೇ ಇತ್ತೀಚೆಗೆ ಆಮಂತ್ರಣದ ಮೇರೆಗೆ ಉಡುಪಿ ಅದಮಾರು ಮಠದಲ್ಲಿ ಹಾಗೂ ಶ್ರೀ ಕೃಷ್ಣ ದೇವಳದಲ್ಲಿ ನಡೆಯುತ್ತಿರುವ ಅಖಂಡ ಭಜನಾ ಕಾರ್ಯಕ್ರಮದಲ್ಲಿಯೂ ಭಾಗವಹಿಸಿದ್ದರು. ಈ ಎರಡೂ ಕಾರ್ಯಕ್ರಮಗಳಲ್ಲಿ ನಮ್ಮ ಸಂಘದಿಂದ ಪ್ರಕಟಿತವಾದ ಉಪಾಸನಾ ಮಂಜರಿಯ ಭಜನೆಗಳನ್ನು ಹಾಡಿದರು. ಉಪಾಸನಾ ಮಂಜರಿಯಲ್ಲಿರುವ ಭಜನೆಗಳ ಸಂಗ್ರಹಕ್ಕೆ ಮೆಚ್ಚುಗೆ ವ್ಯಕ್ತವಾಯಿತು. ಉಡುಪಿಯ ಲೆಕ್ಕಪರಿಶೋಧಕರಾದ ಶ್ರೀ ಗಣೇಶ್ ಹೆಬ್ಬಾರ್‌ರವರ ಪುತ್ರ ಯಾಜ್ಞ್ಯವಲ್ಕ ತಬಲಾದಲ್ಲಿ ಹಾಗೂ ಪೊಳಲಿಯ ಶ್ರೀ ಸುಬ್ಬರಾವ್‌ರವರು ಹಾರ್ಮೋನಿಯಂನಲ್ಲಿ ಸಾಥ್ ನೀಡಿದರು.

## ಮಾಹೆಯ ನೀತಿತತ್ವ ಸಮಿತಿಯ ಅಧ್ಯಕ್ಷರಾಗಿ ನೇಮಕ



ಮಣಿಪಾಲ ವಿ.ವಿ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಹಾಗೂ ಅರೆವೈದ್ಯಕೀಯ ಕಾಲೇಜುಗಳ ಸಂಶೋಧನೆಗಳಿಗೆ ಸಂಬಂಧಿಸಿದ ನೀತಿತತ್ವ ಸಮಿತಿಯ (ಐಇಸಿ) ಸದಸ್ಯರಾಗಿ ಈ ಹಿಂದೆ ಒಂದು ವರ್ಷಕಾಲ ಕಾರ್ಯ ನಿರ್ವಹಿಸುತ್ತಿದ್ದ ಬ್ರಹ್ಮಾವರದ ನಿವೃತ್ತ ಪ್ರಾಂಶುಪಾಲರಾದ ಡಾ। ವೈ. ರವೀಂದ್ರನಾಥ ರಾವ್ ಅವರನ್ನು ಸಂಸ್ಥೆಯು ಪುನರ್ ರಚನೆಯಾದ ನೂತನ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಿದೆ.

ಇತ್ತೀಚೆಗೆ ವೈದ್ಯಕೀಯ–ಜೈವಿಕ ನೀತಿತತ್ವ ಅಧ್ಯಯನವನ್ನು ನಡೆಸಿರುವ ಡಾ. ರಾವ್, ಐಸಿಎಂಆರ್ ನಿಯಮಾವಳಿಯಂತೆ ಎರಡು ವರ್ಷಕಾಲ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಸಂಶೋಧನೆಗಳ ಪರೀಕ್ಷಣ, ಮಂಜೂರಾತಿ ಮತ್ತು ನಿಯಂತ್ರಣಗಳು ಈ ಸಮಿತಿಯ ಕಾರ್ಯಗಳಾಗಿವೆ.


### ವೈವಾಹಿಕ ಜೀವನದ ಬೆಳ್ಳಿಹಬ್ಬದ ಶುಭಾಶಯಗಳು



ಶ್ರೀ ಪಿ. ಶ್ರೀಕಾಂತ್ ರಾವ್ - ಶ್ರೀಮತಿ ಶೈಲಜಾ ಎಸ್. ರಾವ್
ಕೋಶಾಧಿಕಾರಿ, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು
✆ : 9343361618 : 7795116598

ಸಾರ್ಥಕ ಜೀವನದ ಯಶಸ್ವಿ 25 ವಸಂತಗಳನ್ನು ಪೂರೈಸಿ ಬೆಳ್ಳಿಹಬ್ಬವನ್ನು ಆಚರಿಸುತ್ತಿರುವ ನಿಮಗೆ ಶ್ರೀ ದೇವರು ಇನ್ನಷ್ಟು ಉತ್ಸಾಹ, ಆಯುರಾರೋಗ್ಯ ಸಮೃದ್ಧಿಯನ್ನು ನೀಡಲಿ ಎಂದು ಪ್ರಾರ್ಥಿಸುವ,

ಸದನದ ಮಿತ್ರರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು
ಮತ್ತು 'ವಿಜಯ ನಿವಾಸ'ದ ಮನೆಯವರು, ಮಂಗಳೂರು





*With Best Compliments from :*

**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)








### ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

# ಸುಬ್ರಹ್ಮಣ್ಯ ಸಭಾದಲ್ಲಿ ದೀಪಾವಳಿ ಆಚರಣೆ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 10–11–2018ರಂದು ದೀಪಾವಳಿಯನ್ನು ಸಂಭ್ರಮ ಹಾಗೂ ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು. ಶ್ರೀಮತಿ ರಾಜೇಶ್ವರಿ ಹಾಗೂ ಕುಮಾರಿ ಅಭಿಜ್ಞಾರ ಪ್ರಾರ್ಥನೆಯೊಂದಿಗೆ ದೀಪ ಪ್ರಜ್ವಲನ ಮೂಲಕ ಕಾರ್ಯಕ್ರಮವು ಆರಂಭವಾಯಿತು. "ಸಮಾಜವನ್ನು ಒಂದುಗೂಡಿಸಿ, ಸಂಬಂಧ ಪ್ರೀತಿ ವಿಶ್ವಾಸಗಳನ್ನು ವೃದ್ಧಿಸುವುದರ ಮೂಲಕ ದೀಪಾವಳಿ ಆಚರಣೆಯು ಮಹತ್ವ ಪಡೆದುಕೊಂಡಿದೆ" ಎಂದು ಧಾರ್ಮಿಕ ಪ್ರವಚನ ನೀಡಿದ ಶ್ರೀ ಹರಿನಾರಾಯಣ ರಾವ್ ನುಡಿದರು. ವಿನೋದಾತ್ಮಕ ಆಟಗಳು, ಸಾಂಪ್ರದಾಯಿಕ ಉಡುಗೆ ಸ್ಪರ್ಧೆ, ದಾಂಡಿಯಾ ನೃತ್ಯಗಳು ಸಮಾರಂಭದ ಮೆರುಗನ್ನು ಹೆಚ್ಚಿಸಿದವು. ಯುವ ವೇದಿಕೆಯ ಸದಸ್ಯರು, ಮಕ್ಕಳು ಪಟಾಕಿ ಸಿಡಿಸಿ ಸಂಭ್ರಮದಲ್ಲಿ ಪಾಲ್ಗೊಂಡರು. ತೀರ್ಪುಗಾರರಾಗಿ ಶ್ರೀಮತಿ ಮಂಜುಳಾ ಮುರಳಿಧರ್, ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀಮತಿ ಶ್ರೀಲತಾ ಜಯಪ್ರಕಾಶ್ ಸಹಕರಿಸಿದರು ಯುವ ವೇದಿಕೆಯ ಶ್ರೀ ಮನೀಶ್ ರಾವ್, ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ ಕಡಬ, ಮಹಿಳಾ ವೇದಿಕೆಯ ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಕುಸುಮ ನವೀನ್ ಕುಮಾರ್, ಡಾ. ಜಯಲಕ್ಷ್ಮೀ ವ್ಯವಸ್ಥೆಗಳಲ್ಲಿ ಸಹಕರಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು ಕೊನೆಯಲ್ಲಿ ಶ್ರೀಮತಿ ಅನುರಾಧಾ ಕಿಶೋರ್‌ರವರ ನಿರ್ದೇಶನದ 23 ಸದಸ್ಯರ ಆಕರ್ಷಕ ಸಾಮೂಹಿಕ ನೃತ್ಯ ಕಾರ್ಯಕ್ರಮವನ್ನು ಪ್ರದರ್ಶಿಸಲಾಯಿತು.

**ಚಿತ್ರ : ಶ್ರೀ ರಘುವೀರ ಪೆರ್ಡೂರ್**




## ಶ್ರೀ ಶಾರದಾ ದೇವಿಗೆ ಬೆಳ್ಳಿಯ ಹಾರದ ಕಾಣಿಕೆ

ಶ್ರೀ ಶಾರದಾ ದೇವಿಯ ನವರಾತ್ರಿಯ ಸಂದರ್ಭದಲ್ಲಿ ನಮ್ಮ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರ ರಾವ್ ಹಾಗೂ ಶ್ರೀಮತಿ ಜಯಶ್ರೀ ದಂಪತಿಗಳು ಶ್ರೀ ಶಾರದಾ ದೇವಿಗೆ ಬೆಳ್ಳಿಯ ಹಾರವನ್ನು ಸೇವಾ ರೂಪದಲ್ಲಿ ಸಮರ್ಪಿಸಿದರು.

## ಚಿಣ್ಣರ ಅಂಗಳ







**ಅನಘಾ ರಾವ್,**
8ನೇ ತರಗತಿ,
ಬಿ.ಜಿ.ಎಸ್.,
ಎನ್.ಸಿ.ಎಸ್.,
ಬೆಂಗಳೂರು.




ತಂತ್ರಾಡಿ ವಿಶ್ವನಾಥ ಶಾನುಭೋಗ್

94487 24161
97417 85551

ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ – 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+

**With Best Compliments From :**

# ***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

**SHIVAJI CIRCLE, POWAI NAKA, SATARA-415001**
**Ph : 02162-234017, 233818**
**Fax : 02162-233885 E-mail : rajathadri.satara@gmail.com**


Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org